(3) ಕರ್ನಾಟಕ ರಾಜ್ಯದಲ್ಲಿ ಖಾಸಗಿ ಬಸ್ಸುಗಳಿಗೆ ರಹದಾರಿ ನೀಡುವ ಕುರಿತು.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ, ವಿವಾಹ ಸಂಬಂಧ ಪ್ರಯಾಣ, ಸಾಂಸ್ಕೃತಿಕ ಪ್ರವಾಸ, ರೈತರ ಯುವಕರ ಪ್ರಯಾಣಕ್ಕಾಗಿ ಹಿಂದೆ ಖಾಸಗಿ ಬಸ್ಸುಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಅವಕಾಶವಿದ್ದಿತು. ಈ ರಹದಾರಿ ನೀಡುವ ಕ್ರಮದ ರದ್ದಿಯಾಯಿತಿಯಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆ ಆಗಿದೆ. ಆದರೆ, ಕೇರಳ, ತಮಿಳುನಾಡು ಹೀಗೆ ಗಡಿ ಭಾಗದ ಬಸ್ಸುಗಳಿಗೆ ಕರ್ನಾಟಕದಲ್ಲಿ ಸಂಚರಿಸಲು ರಹದಾರಿ ನೀಡಲಾಗುತ್ತದೆ. ಇದರಿಂದ ರಾಜ್ಯದ ಬೊಕ್ಕಸಕ್ಕೂ ನಷ್ಟ. ಸಾರ್ವಜನಿಕರಿಗೂ ತೊಂದರೆ. ಈ ವಿಚಾರ ಪುನರ್ ಪರಿಶೀಲಿಸಿ ರಾಜ್ಯದಲ್ಲಿ ಖಾಸಗಿ ಬಸ್ಸುಗಳಿಗೆ ರಹದಾರಿ ನೀಡುವ ವ್ಯವಸ್ಥೆ ಮಾಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರವನ್ನು ಒದಗಿಸಲಾಗುತ್ತದೆ.

(4) ಬಗರ್ ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸಲು ಕಾಲದ ಮಿತಿಯನ್ನು ಒಂದು ತಿಂಗಳು ಮುಂದುವರಿಸುವುದು.

ಶ್ರೀ ಜಿ. ರಾಜೂಗೌಡ : ಮಾನ್ಯ ಅಧ್ಯಕ್ಷರೇ, ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಕಾಲದ ಮಿತಿಯನ್ನು ಗೊತ್ತು ಮಾಡಿದ್ದುದು ಸರಿಯಷ್ಟೇ. ಈ ಕಾಲಮಿತಿ 17-9-1991 ಕ್ಕೆ ಮುಗಿದಿರುತ್ತೆ. ಅನೇಕ ಗ್ರಾಮಾಂತರ ಮತ್ತು ಬೆಟ್ಟದ ತಪ್ಪಲ ವಾಸಿಗಳಿಗೆ ಕಾಲಮಿತಿಯ ಅರಿವಿಲ್ಲದಿರುವುದರಿಂದಲೂ, ಈವಾಗ ಪ್ರತಿನಿತ್ಯ ನೂರಾರು ಅರ್ಜಿಗಳು ತಾಲ್ಲೂಕು ಕಛೇರಿಗೆ ಬರುತ್ತಿರುವುದರಿಂದಲೂ ನಮ್ಮ ಸರ್ಕಾರದ ಗುರಿ, ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಕೆಲಸ ಪೂರ್ಣಮಟ್ಟದಲ್ಲಿ ನೆರವೇರಬೇಕಾದರೆ ತಾವು ಕನಿಷ್ಠ ಇನ್ನೊಂದು ತಿಂಗಳಾದರೂ ಅವಧಿಯನ್ನು ವಿಸ್ತರಿಸಬೇಕೆಂದು ಈ ಮುಖಾಂತರ ಮಾನ್ಯ ಕಂದಾಯ ಸಚಿವರನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ರಾಜ್ಯಾದ್ಯಂತ ಸರ್ಕಾರಿ ಜಮೀನುಗಳಲ್ಲಿ ನಡೆದಿರುವ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕ್ಕೆ ತಿದ್ದುಪಡಿಯನ್ನು ಮಾಡಿ ಕಲಂ ೯೪ಎ ಅನ್ನು ಸೇರಿಸಲಾಗಿದೆ. ಸದರಿ ತಿದ್ದುಪಡಿ ಕಾಯಿದೆಯು 20-3-1991 ರಿಂದ ಜಾರಿಗೆ ಬಂದಿರುತ್ತದೆ. ಇದರಡಿಯಲ್ಲಿ, ಸಕ್ರಮಗೊಳಿಸಲು ಅರ್ಜಿಗಳನ್ನು ಈ ತಿದ್ದುಪಡಿ ಕಾಯಿದೆಯು ಜಾರಿಗೆ ಬಂದಂದಿನಿಂದ ಆರು ತಿಂಗಳೊಳಗಾಗಿ ಸಂಬಂಧಪಟ್ಟ ತಹಶೀಲ್ದಾರರಿಗೆ ಸಲ್ಲಿಸಬೇಕಾಗಿದೆ. ಈ ಅವಧಿಯು ದಿನಾಂಕ 19.9.1991 ಕ್ಕೆ ಅಂತ್ಯವಾಗಿರುತ್ತದೆ. ಸಕ್ರಮೀಕರಣಗೊಳಿಸಲು ಅರ್ಜಿಗಳನ್ನು ಸಲ್ಲಿಸಲು ಮಾತ್ರ ಕಾಲಮಿತಿಯನ್ನು ಗೊತ್ತುಪಡಿಸಿದೆ, ಸಕ್ರಮೀಕರಣಗೊಳಿಸಲಿಲ್ಲ.

ಸಾರ್ವಜನಿಕರಿಂದ, ಇಲ್ಲಿಯವರೆಗೆ ಅನಧಿಕೃತ ಸಾಗುವಳಿಗಳನ್ನು ಸಕ್ರಮಗೊಳಿಸುವ ಸಲುವಾಗಿ ಸ್ವೀಕರಿಸಲಾದ ಅರ್ಜಿಗಳ ಬಗ್ಗೆ ಕೆಲವು ಜಿಲ್ಲೆಗಳಿಂದ ಬಂದಿರುವ ಮಾಹಿತಿಯ ಪ್ರಕಾರ, ಸರ್ಕಾರವು ನಿರೀಕ್ಷಿಸಿದ್ದ ಅರ್ಜಿಗಳ ಸಂಖ್ಯೆಗಿಂತ ಸುಮಾರು ಐದರಿಂದ ಹತ್ತರಷ್ಟು ಹೆಚ್ಚಾಗಿ ಬಂದಿರುವುದು ತಿಳಿದು ಬರುತ್ತದೆ. ಆದುದರಿಂದ ಈ ಅವಧಿಯನ್ನು ವಿಸ್ತರಿಸಲು ಯಾವುದೇ ಕಾರಣಗಳಿರುವುದು ಕಂಡುಬರುತ್ತಿಲ್ಲವಾದ್ದರಿಂದ ಅರ್ಜಿಗಳನ್ನು ಸ್ವೀಕರಿಸಲು ಅವಧಿಯನ್ನು ವಿಸ್ತರಿಸಿಲ್ಲ.